ಶ್ರೀ ರಾಮಕೃಷ್ಣ ಹೆಗಡೆ (ವಂಚಿತ ವರ್ಗಗಳ ಮಂತ್ರಿಯವರು).—

ಅ) ಸರಕಾರೀ ನೌಕರರು ಹಲವು ಸಂದರ್ಭದಲ್ಲಿ ವರ್ಗಾವಣೆ ಹೊಂದದೆ ನಿಗಧಿತ ಅವಧಿಗಿಂತ ಹೆಚ್ಚು ಕಾಲ ಒಂದೇ ಸ್ಥಳದಲ್ಲಿರುತ್ತಾರೆಂಬುದು ಸರಕಾರದ ಗಮನದಲ್ಲಿದೆ.

ಆ) ವರ್ಗಾವಣೆಗೊಳಪಡುವ ಸರಕಾರೀ ನೌಕರರು ಒಂದೇ ಸ್ಥಳಗಳಲ್ಲಿರಬಹುದಾದ ಕನಿಷ್ಟ ಮತ್ತು ಗರಿಷ್ಟ ಮಿತಿಯನ್ನು ನಿಗಧಿಪಡಿಸಲಾಗಿದೆ. ಪಂತ್ರು ಬೆಂಗಳೂರಿಗೆ ಸಂಬಂಧಿಸಿದಂತೆ ಅವರು ೫ ವರ್ಷಗಳಿಗಿಂತ ಮೇಲ್ಪಟ್ಟು ಬೆಂಗಳೂರಿನಲ್ಲಿರಬಾರದೆಂದು ಈ ಅವಧಿ ಮುಗಿದ ನಂತರ ಅವರನ್ನು ವರ್ಗಾವಣೆ ಮಾಡಲೇಬೇಕೆಂದು ನಿಯಮದಲ್ಲಿ ಸ್ಪಷ್ಟಪಡಿಸಲಾಗಿದೆ. ಈ ನಿಯಮವನ್ನು ಕಾರ್ಯಗತಗೊಳಿಸುವುದರಿಂದ ಗ್ರಾಮಾಂತರ ಪ್ರದೇಶದಲ್ಲಿ ಕೆಲಸ ಮಾಡುತ್ತಿರುವ ಸರಕಾರೀ ನೌಕರರಿಗೆ ಬೆಂಗಳೂರು ಸೇರಿದಂತೆ ಪಟ್ಟಣ ಪ್ರದೇಶಗಳಿಗೆ ವರ್ಗಾವಣೆ ಹೊಂದುವ ಎಲ್ಲಾ ಅವಕಾಶಗಳೂ ಇವೆ.

ಇ) ಈ ವಿಷಯದ ಬಗ್ಗೆ ಸೂಚನೆಗಳನ್ನು ಈಗಾಗಲೇ ನೀಡಲಾಗಿದೆ.

ಶಹಪುರ ತಾಲ್ಲೂಕಿನಲ್ಲಿ ಅಂಗನವಾಡಿ ಪ್ರಾರಂಭಿಸುವ ಬಗ್ಗೆ

೧೭೫೯. ಶ್ರೀ ಶಿವಶೇಖರಪ್ಪ ಗೌಡ ಶಿರವಾಳ (ಶಹಪುರ).—ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ. ಶಹಪುರ ತಾಲ್ಲೂಕಿನಲ್ಲಿ ಅಂಗನವಾಡಿಗಳನ್ನು ಪ್ರಾರಂಭಿಸುವುದಕ್ಕೆ ಕಾರಣಗಳೇನು?

ಆ. ಅಂಗನವಾಡಿಗಳನ್ನು ಪ್ರಾರಂಭಿಸಲು ಸರ್ಕಾರದವರು ಪರ್ಯಾಲೋಚಿಸುತ್ತಿರುವರೇ?

ಇ. ಹಾಗಿದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ವಿ.ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿಗಳು).—

ಅ. ಶಹಪುರ ತಾಲ್ಲೂಕಿಗೆ ಸಮಗ್ರ ಬಾಲ ವಿಕಾಶ ಯೋಜನೆ ಮಂಜೂರಾಗದೆಯಿರುವುದರಿಂದ ಅಂಗನವಾಡಿ ಕೇಂದ್ರಗಳನ್ನು ತೆರೆದಿರುವುದಿಲ್ಲ.

ಆ. ಹೌದು.

ಇ. ಮುಂಬರುವ ಪಂಚವಾರ್ಷಿಕ ಯೋಜನೆಯಲ್ಲಿ ಈ ತಾಲ್ಲೂಕಿಗೆ ವಿಸ್ತರಿಸಲಾಗುವುದು.

ಔರಾದ ತಾಲ್ಲೂಕಿನಲ್ಲಿನ ಗ್ರಾಮಗಳಲ್ಲಿ ರಸ್ತೆ ನಿರ್ಮಾಣದ ಬಗ್ಗೆ.

೧೫೩೮. ಶ್ರೀ ಗುರುಪಾದಪ್ಪ ಸಾಗಾವಾರಹಳ್ಳಿ (ಔರಾದ).—ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೫ ರಿಂದ ೧೯೮೬ ರವರೆಗೆ ಔರಾಧ ತಾಲ್ಲೂಕಿನ ಎಷ್ಟು ಗ್ರಾಮಗಳಲ್ಲಿ ರಸ್ತೆ ನಿರ್ಮಾಣ ಕಾಮಗಾರಿಗಳನ್ನು ಕೈಕೊಳ್ಳಲಾಗಿದೆ ಹಾಗೂ ಈ ಬಗ್ಗೆ ಮೆಚ್ಚವಾದ ಒಟ್ಟು ಮೊಬಲಗೆಷ್ಟು,

ಆ)ಕೆಲಸಕ್ಕೆ ತಕ್ಕ ಧಾನ್ಯದ ಯೋಜನೆ ಮೇರೆಗೆ ಆಳತೆ ದಾಖಲಾತಿ ಪುಸ್ತಕದಲ್ಲಿ ನಮೂದಿಸಿರುವಂತೆ ಕೈಕೊಳ್ಳಬೇಕಾದ ಕಾಮಗಾರಿಗಳಿಗೆ ಮೆಚ್ಚವಾದ ಮೊಬಲಗೆಷ್ಟು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ೧೯೮೫ ರಿಂದ ೧೯೮೬ ರವರೆಗೆ ಔರಾಧ ತಾಲ್ಲೂಕಿನ ೩೮ ಗ್ರಾಮಗಳಿಗೆ ರಸ್ತೆ ನಿರ್ಮಾಣ ಕಾಮಗಾರಿಗಳನ್ನು ಕೈಕೊಳ್ಳಲಾಗಿದೆ. ಈ ಕಾಮಗಾರಿಗಳ ಮೇಲೆ ಒಟ್ಟು ೯೪.೫೭ ಲಕ್ಷ ರೂಪಾಯಿ ಮೆಚ್ಚವಾಗಿದೆ.

ಆ) ಬೀದರ್ ಲೋಕೋಪಯೋಗಿ ಇಲಾಖೆಯಲ್ಲಿ ಇಂತಹ ಯೋಜನೆಯಿಲ್ಲ.